"ಪ್ರಜಾವಾಣಿ" "PRAJAVANI" DATE- 03/01/2016
PAGE- 02

## ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಹೇಳಿಕೆ

# ಒಂದೇ ಜಾಲದಡಿ ರಕ್ತನಿಧಿ ಕೇಂದ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಎಲ್ಲ ರಕ್ತನಿಧಿ ಕೇಂದ್ರಗಳನ್ನು ಒಂದೇ ಜಾಲದೊಳಗೆ ತರಲಾಗುತ್ತಿದ್ದು, ಈ ತಿಂಗಳ ಅಂತ್ಯದಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಹೇಳಿದರು.

ಅದಮ್ಯ ಚೇತನ ಸೇವಾ ಉತ್ಸವದ 'ಆರೋಗ್ಯ ಸಂಜೀವಿನಿ' ಕಾರ್ಯಕ್ರಮದಲ್ಲಿ ಶನಿವಾರ ವೈದ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

'ಎಲ್ಲ ರಕ್ತನಿಧಿ ಕೇಂದ್ರಗಳನ್ನು ಒಂದೇ ಜಾಲಕ್ಕೆ ತಂದರೆ ಯಾವ ಗುಂಪಿನ ರಕ್ತ, ಎಷ್ಟು ಲಭ್ಯ ಇದೆ ಎಂಬುದು ಗೊತ್ತಾಗುತ್ತದೆ. ಅಲ್ಲದೇ, ರಕ್ತದಾನಿಗಳನ್ನು ನೇರವಾಗಿ ಸಂಪರ್ಕಿಸಲು ಸಾಧ್ಯವಾಗುತ್ತದೆ' ಎಂದರು.

ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, 'ಉತ್ತಮ ಆರೋಗ್ಯ ಹೊಂದಲು ಸ್ವಚ್ಛ ಕುಡಿಯುವ ನೀರು, ಪೌಷ್ಟಿಕ ಆಹಾರ ಬಹಳ ಮುಖ್ಯ.



ಜೆ.ಪಿ. ನಡ್ಡಾ ಅವರು ಡಾ.ಸಿ.ಎನ್. ಮಂಜುನಾಥ್ ಅವರನ್ನು ಸನ್ಮಾನಿಸಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ವೈದ್ಯ ಡಾ. ಶ್ರೀನಾಥ್ ಅವರು ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಚಿತ್ರ

ರಾಸಾಯನಿಕ ಗೊಬ್ಬರ, ಔಷಧ ಬಳಕೆಯಿಂದಾಗಿ ಎಲ್ಲ ಪದಾರ್ಥಗಳು ವಿಷಯುಕ್ತವಾಗಿವೆ. ಹೀಗಾಗಿ ಸಾವಯವ ಬೆಳೆ ಬೆಳೆಯಲು ಕೇಂದ್ರ ಸರ್ಕಾರ ಸಬ್ಸಿಡಿ ನೀಡಬೇಕು' ಎಂದರು.

'ಪ್ರಸ್ತುತ ನಾಲ್ಕು ಜನರಲ್ಲಿ ಒಬ್ಬರು ಹೃದಯಾಘಾತದಿಂದ ಸಾವನ್ನಪ್ಪುತ್ತಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರ ಹೃದಯಾಘಾತವನ್ನು ರಾಷ್ಟ್ರೀಯ ಪ್ರಮುಖ ಕಾಯಿಲೆ ಎಂದು ಘೋಷಿಸಿ, ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.